**OS.No**.26/2018 **DW**-2

**ದಿನಾಂಕಃ 15.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು ವಾದಿಯರ ಪರ ಶ್ರೀ.ಹೆಚ್.ಜಿ. ವಕೀಲರಿಂದಃ**

ನಾನು 5ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ತಂದೆ ರುದ್ರೇಗೌಡರರಿಗೆ 4 ಜನ ಸಹೋದರರು ಮತ್ತು ಇಬ್ಬರು ಸಹೋದರಿಯರು. ನನ್ನ ಅಜ್ಜನಿಂದ ಬಂದ ಆಸ್ತಿಯನ್ನು ನನ್ನ ತಂದೆ ಹಾಗೂ ಸಹೋದರರು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ವಾಸವಾಗಿರುತ್ತಾರೆಂದರೆ ಹೌದು. ನನ್ನ ತಂದೆ ಹಾಗೂ ಸೆಹೋದರರು ಮಾಡಿಕೊಂಡ ವಿಭಾಗ ಪತ್ರಕ್ಕೆ ಅವರ ಸಹೋದರಿಯರಾದ ಜವರಮ್ಮ ಮತ್ತು ಸಾವಿತ್ರಮ್ಮರವರು ಸಹ ಸಹಿ ಮಾಡಿರುತ್ತಾರೆಂದರೆ ಗೊತ್ತಿಲ್ಲ. ನನ್ನ ತಂದೆ ಹಾಗೂ ಅವರ ಸಹೋದರ ಹಾಗೂ ಸಹೋದರಿಯವರು ದಿಃ 22.05.2013 ರಂದು ಮಾಡಿಕೊಂಡು ವಿಭಾಗ ಪತ್ರವು ನೋಂದಣಿಯಾಗಿರುತ್ತದೆಂದರೆ ಗೊತ್ತಿಲ್ಲ. ನನ್ನ ತಂದೆಯ ಸಹೋದರಿಯವರಾದ ಜವರಮ್ಮ ಮತ್ತು ಸಾವಿತ್ರಮ್ಮರವರು ತಮ್ಮ ಹಿಸ್ಸೆ ಬಾಬ್ತು 10 ಸಾವಿರ ಪಡೆದು ತಮ್ಮ ಹಕ್ಕನ್ನು ಬಿಟ್ಟುಕೊಟ್ಟಿದ್ದು, ಈ ವಿಷಯ ನೋಂದಾಯಿತ ವಿಭಾಗಪತ್ರದಲ್ಲಿ ಬರೆಯಲಾಗಿರುತ್ತದೆಂದರೆ ಗೊತ್ತಿಲ್ಲ. 1 ಮತ್ತು ಎದುರುದಾರರು ತಮ್ಮ ಮಕ್ಕಳು ಎಂದರೆ ಹೌದು. ಭಾರತಿ ನನ್ನ ಹೆಂಡತಿ ಎಂದರೆ ಹೌದು.

ಸುಮಾರು 22 ವರ್ಷಗಳಿಂದ ನನ್ನ ಹೆಂಡತಿ ಭಾರತಿ ಮತ್ತು ಮಕ್ಕಳು ನನ್ನನ್ನು ಬಿಟ್ಟು ಹೋಗಿದ್ದು, ಈಗ ಜಮೀನಿನ ಮೇಲೆ ಮತ್ತು ರಸ್ತೆಗಾಗಿ ಭೂಸ್ವಾಧೀನವಾದ ಹಣದ ಮೇಲೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ದಾವಾ ಆಸ್ತಿಗಳು ನಿಮಗೆ ಯಾವ ರೀತಿ ಬಂದಿರುತ್ತವೆಂದರೆ ಸಾಕ್ಷಿ ನನ್ನ ತಾತ ತಿಮ್ಮೇಗೌಡರಿಂದ ದಾವಾ ಆಸ್ತಿಗಳು ನನ್ನ ತಂದೆ ಹೆಸರಿಗೆ ಬಂದಿದ್ದು, ಈಗಲೂ ಸಹ

ಅವು ನನ್ನ ತಂದೆಯ ಹೆಸರಿನಲ್ಲಿವೆಂದು ನುಡಿಯುತ್ತಾರೆ. ದಾವಾ ಆಸ್ತಿಗಳು ನನ್ನ ತಾತಾನಿಂದ ಬಂದ ಆಸ್ತಿಯಾಗಿದ್ದರಿಂದ ಅವುಗಳಲ್ಲಿ ವಾದಿಯರಿಗೆ ಸಮಾನಾದ ಹಕ್ಕು ಇದೆಯೆಂದರೆ ಸಾಕ್ಷಿ ಸ್ವಲ್ಪ ಮಟ್ಟಿಗೆ ಇದೆ ಅದರಲ್ಲಿ ನನಗೂ ಸಹ ಇದೆಯೆಂದು ನುಡಿಯುತ್ತಾರೆ.

ವಾದಿಯರಿಗೆ ಖರ್ಚು ವೆಚ್ಚಕ್ಕಾಗಿ ನೀವೇನಾದರೂ ಹಣ ಕೊಡುತ್ತಿರಾ ಎಂದರೆ ಸಾಕ್ಷಿ ಹರಿಹರಪುರದಲ್ಲಿರುವ 30 ಗುಂಟೆ ಜಮೀನು ಕೊಟ್ಟಿದ್ದೇನೆ ಅದರ ಸರ್ವೆ ನಂಬರು ಹೇಳಲು ಬರುವುದಿಲ್ಲ. 30 ಗುಂಟೆ ಜಮೀನನ್ನು ನನ್ನ ಮಕ್ಕಳಿಗೆ ಕೊಟ್ಟ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಾವಾ ಆಸ್ತಿಗಳು ನನ್ನ ತಂದೆ ರುದ್ರೇಗೌಡರಿಗೆ ಮಾತ್ರ ಸೇರಿದ್ದರಿಂದ ಅವರ ಸಹೋದರರಿಗೆ ಮತ್ತು ಸಹೋದರಿಯರಿಗೆ ದಾವಾ ಆಸ್ತಿಗಳಲ್ಲಿ ಯಾವ ಹಕ್ಕು ಇಲ್ಲವೆಂದರೆ ಸಾಕ್ಷಿ 3 ಮತ್ತು 4ನೇ ಪ್ರತಿವಾದಿಗಳು ನನ್ನ ಅತ್ತೆಯಂದಿರು, ಹಿಸ್ಸೆ ಕೇಳುತ್ತಿದ್ದಾರೆಂದು ನುಡಿಯುತ್ತಾರೆ. 3 ಮತ್ತು 4ನೇ ಪ್ರತಿವಾದಿಗಳು ದಿಃ 22.05.2013 ರ ನೊಂದಾಯಿತ ವಿಭಾಗ ಪತ್ರದ ಮೂಲಕ ತಲಾ 10 ಸಾವಿರ ಪಡೆದುಕೊಂಡಿದ್ದರಿಂದ ದಾವಾ ಆಸ್ತಿಳಲ್ಲಿ ಹಕ್ಕು ಇಲ್ಲವೆಂದರೆ ಸಾಕ್ಷಿ ದಾವಾ ಆಸ್ತಿಗಳಲ್ಲಿ ಹಿಸ್ಸೆ ಇದೆಯೆಂದು ಗಲಾಟೆ ಮಾಡುತ್ತಿದ್ದಾರೆಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.